## ಕವಿತೆ




### ಕೆ.ವೈ. ನಾರಾಯಣಸ್ವಾಮಿ

ಕಲೆ: ವಿಶ್ವನಾಥ ಎ.ಎಸ್




# ಇಂದಲ್ಲ ನಾಳೆ

ಅವಳು ಅಕಾರಣವಾಗಿ ಪ್ರೀತಿಸಿದಂತೆಯೇ
ನಿಷ್ಕಾರಣವಾಗಿ ಮುನಿಸಿಕೊಂಡಳು ಒಂದು ದಿನ.
ನಡುನೀರಿನಲ್ಲಿ ತಳ ಒಡೆದಂತೆ ದೋಣಿ
ಸಾವಿನೆದುರು ಸೆಣೆಸಲೆಷ್ಟು ಭರವಸೆಯ ಅಸ್ತ್ರ
ಅಗಲಿಕೆಯ ಎದಿರು ಪ್ರಾಣ ನಿತ್ರಾಣ
ಅಂದಿನಿಂದ ಅಲ್ಲಲ್ಲ ಆ ಕ್ಷಣಾರ್ಧದಿಂದ
ಗಾಳಿಯಲ್ಲಿ ಪರಿಮಳವಿಲ್ಲ
ರಸ ರುಚಿಸುತ್ತಿಲ್ಲ.
ಚುಕ್ಕಿ ಕಣ್ಣು ಮಿನುಗುತ್ತಿಲ್ಲ.
ಹಗಲು ಎದೆಯುರಿಸುವ ಬಿಸಿಲು
ಅನಂತ ಸಂಭವಗಳನ್ನು ಬಚ್ಚಿಟ್ಟುಕೊಂಡಿರುವ ಭವಿಷ್ಯವೇ
ಎಷ್ಟು ಹತ್ತಿರ ಎಷ್ಟು ದೂರದಲ್ಲಿದೆ
ಆಕಾಶದಿಂದ ಉದುರಿದ ಮಳೆ ಹನಿ
ನೆಲ ಸೇರಲಿಕ್ಕೆ. ಗಾಳಿ ಬೀಸಿ ಹೊಯ್ಯದಿರಲಿ
ಆ ಅಮೃತ ಬಿಂದುವನು ಕಡಲ ಕನಿಕರಕ್ಕೆ.
ಅವಳಾರೆಂದು ತಿಳಿಯುವ ಮೊದಲೇ
ಅವಳನ್ನು ಪ್ರೀತಿಸುತ್ತಿದೆ.
ಪ್ರತಿ ಇರುಳು ಕಣ್ಣ ರೇವಿಂದ ಕಳಿಸುತ್ತಿದೆ
ಪ್ರೇಮ ಸಂದೇಶವನ್ನೊತ್ತ ನಾವೆಯನ್ನು
ಗೊತ್ತಿರದಿದ್ದರು ಗೊತ್ತಿರುವಂತೆ ಅವಳಿರುವ ದಡ
ಕಾಯುತ್ತಿದೆ ನಿರಾಶೆಗೊಳ್ಳದಂತೆ
ಮರು ಓಲೆಯಂತೆ ಬರುತ್ತಿತ್ತು ಮುಂಜಾನೆ.
ಅಹಂ ಸಾಕು ಯುದ್ಧ ಘೋಷಿಸಲು
ತಾಳ್ಮೆಯ ಬಲ ಬೇಕು ಪ್ರೀತಿಸಲು
ನೀನು ಮುನಿದು ಲಕ್ಷ ಅಕ್ಷೋಹಿಣಿ ಕ್ಷಣಗಳು
ಕಳೆದುಹೋಗಿವೆ.
ಆದರೂ ನಾನು ಕಳೆದುಕೊಂಡಿಲ್ಲ,
ಇಂದಲ್ಲ ನಾಳೆ ಪ್ರೇಮ ಹಿಂತಿರುಗಿಬರುವುದು
ಎಂಬ ಭರವಸೆಯನ್ನ.

